ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

ಸಿ.ಸಿ.1085/2025

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಬ್ದುಲ್ ಖಾದರ್ | ಪಿ.ಡಬ್ಯೂ.4 |
| ತಂದೆಯ ಹೆಸರು | : | ಉಸ್ಮಾನ್ ಖಾಕ | ಸಿ.ಡಬ್ಯೂ.1 |
| ವಯಸ್ಸು | : | 50 ವರ್ಷ | |
| ವೃತ್ತಿ | : | ಪಿ.ಐ, ಸಿ.ಇ.ಎನ್ ಪೊಲೀಸ್ ಠಾಣೆ | |
| ವಾಸ | : | ಚಿಕ್ಕಮಗಳೂರು | |

ದಿನಾಂಕಃ 20-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-

ನಾನು 31.12.2025 ರಿಂದ ದಿಃ08.01.2026 ರವರೆಗೆ ಚಿಕ್ಕಮಗಳೂರು ಸಿ.ಇ.ಎನ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಹಾಗೂ ನಂತರ ಇಲ್ಲಿಯವರೆಗೂ ಪಿ.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ28.03.2025 ರಂದು ಸಂಜೆಃ06.00 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಆಲ್ದೂರು ಹೋಬಳಿ, ಕಬ್ಬಿಣಸೇತುವೆ ಗ್ರಾಮದ ಪೂರ್ಣೇಶ್ ಎಂಬವರ ಮನೆಯ ಹಿಂಭಾಗದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ವರ್ತಮಾನದ ಮೇರೆಗೆ ಮೇಲಾಧಿಕಾರಿಯವರಿಗೆ ವಿಷಯ ತಿಳಿಸಿ ಸ್ವಪಿರ್ಯಾದಿಯ ಮೇರೆಗೆ ಪ್ರಕರಣವನ್ನು ದಾಖಲಿಸಿ ಪ್ರ.ವ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಸ್ವ

ಪಿರ್ಯಾದನ್ನು ನೋಡುತ್ತಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-8(ಎ) ಇರುತ್ತದೆ. ಪ್ರ.ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-9(ಎ) ಇರುತ್ತದೆ. ನಂತರ ಸಿಬ್ಬಂದಿಯವರಾದ ಚಾಸಾ-4 ರಿಂದ ಚಾಸಾ-6 ರವರನ್ನು ಕರೆದುಕೊಂಡು ನನ್ನ ಸ್ವಂತ ಕಾರ್ ನಂ.ಕೆಎ-20/ಎಂ.ಎ-6921 ರಲ್ಲಿ ಸಂಜೆ:06.50 ಗಂಟೆಗೆ ಠಾಣೆಯಿಂದ ಹೊರಟು ಕಬ್ಬಿಣಸೇತುವೆ ಗ್ರಾಮದ ಪೆಟ್ರೋಲ್ ಬಂಕ್ ಬಳಿ ಹೋಗಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಪರಿಚಯಿಸಿಕೊಂಡು ಅವರಿಗೆ ವಿಷಯವನ್ನು ತಿಳಿಸಿರುತ್ತೇನೆ. ಅವರು ಪಂಚರಾಗಿ ಸಹಕರಿಸುವಂತೆ ಒಪ್ಪಿಕೊಂಡ ಮೇರೆಗೆ ಅವರಿಗೆ ನೋಟೀಸ್ ಅನ್ನು ನೀಡಿರುತ್ತೇನೆ. ಸದರಿ ನೋಟೀಸ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-1(ಸಿ) ಇರುತ್ತದೆ.

ನಂತರ ಪೂರ್ಣೇಶ್ ಗೌಡರ ಮನೆಯ ಹಿಂಭಾಗ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿಯು 4 ಜನರಿಗೆ ಒಂದು ಪ್ಲಾಸ್ಟೀಕ್ ಚೀಲದಲ್ಲಿ ಮದ್ಯವನ್ನು ಇಟ್ಟು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸ್ಥಳಕ್ಕೆ ದಾಳಿ ಮಾಡಲು ಹೋಗುತ್ತಿದ್ದಂತೆ ನಮ್ಮನ್ನು ನೋಡಿ ಆ ವ್ಯಕ್ತಿಯು ಹಾಗೂ 4 ಜನ ಗ್ರಾಹಕರು ಓಡಿ ಹೋಗಿರುತ್ತಾರೆ. ನಂತರ ಸ್ಥಳದಲ್ಲಿ ಪರಿಶೀಲನೆ ಮಾಡಲಾಗಿ ಆ ಸ್ಥಳಕ್ಕೆ ಇನ್ನಿಬ್ಬರು ವ್ಯಕ್ತಿಗಳು ಬಂದಿರುತ್ತಾರೆ. ಅವರನ್ನು ವಿಚಾರಿಸಲಾಗಿ ಅವರು ಮದ್ಯವನ್ನು ಖರೀದಿಸಲು ಅಲ್ಲಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಅವರಲ್ಲಿ ಹೇಳಿಕೆಯನ್ನು ನೀಡಲು ವಿನಂತಿಸಲಾಗಿ ಅವರು ನಿರಾಕರಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಸ್ಥಳದಲ್ಲಿ

ಇದ್ದ 90 ಎಂ.ಎಲ್. ನ ಓರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿಯ 45 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್. ನ ಕ್ಯಾಪ್ಟನ್ ಮಾರ್ಟಿನ್ ಸ್ಪೆಷಲ್ ವಿಸ್ಕಿಯ 23 ಟೆಟ್ರಾ ಪ್ಯಾಕೇಟ್ ಗಳು, 90 ಎಂ.ಎಲ್. ನ ಬ್ಯಾಕ್ ಪೈಪರ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್ ಗಳು, 180 ಎಂ.ಎಲ್. ನ ಓಲ್ಡ್ ಟವರಿನ್ ವಿಸ್ಕಿಯ 7 ಟೆಟ್ರಾ ಪ್ಯಾಕೇಟ್ ಗಳನ್ನು ಪಂಚರ ಸಮಕ್ಷಮ ಪರಿಶೀಲಿಸಿ ಅಲ್ಲಿಯೇ ಇದ್ದ ಬಿಳಿ ಬಣ್ಣದ ಪ್ಲಾಸ್ಟೀಕ್  ಚೀಲದಲ್ಲಿ ತುಂಬಿಸಿ ಸೀಲು ಮಾಡಿರುತ್ತೇವೆ. ಅದಕ್ಕೆ ನನ್ನ ಹಾಗೂ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಿರುತ್ತೇವೆ. ಸ್ಥಳದಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಸ್ಥಳದಲ್ಲಿ ಪಂಚನಾಮೆಯನ್ನು ಹಾಗೂ ಕಚ್ಚಾ ನಕಾಶೆಯನ್ನು ತಯಾರಿಸಿರುತ್ತೇವೆ. ಸದರಿ ಪಂಚನಾಮೆಯನ್ನು ಸಂಜೆಃ07.40 ರಿಂದ 08.40 ರವರೆಗೆ ತಯಾರಿಸಿರುತ್ತೇವೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-2(ಡಿ) ಇರುತ್ತದೆ. ಫೋಟೋವನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ನಂತರ ಸ್ವತ್ತಿನ ಜೊತೆಗೆ ಠಾಣೆಗೆ ವಾಪಾಸಾಗಿ ವರದಿಯನ್ನು ತಯಾರಿಸಿ  ಚಾಸಾ-9 ರವರಿಗೆ ನೀಡಿರುತ್ತೇನೆ. ಸದರಿ ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಗಿ ನನ್ನ ಸಹಿ ನಿಪಿ-10(ಎ) ಇರುತ್ತದೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಟೆಟ್ರಾ ಪ್ಯಾಕೇಟ್ ಗಳು ಹಾಗೂ ಪ್ಲಾಸ್ಟೀಕ್ ಚೀಲವನ್ನು ಮು.ಮಾ.1 ಮತ್ತು 2 ಎಂದು ಗುರುತಿಸಲಾಗಿರುತ್ತದೆ. ಅದನ್ನು ನೋಡಿ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ದಿಃ28.03.2025 ರಂದು ಚಾಸಾ-9 ರವರು ನಮ್ಮ ಠಾಣೆಯಲ್ಲಿ ಮಾಹಿತಿ ಬಂದ ಸಮಯದಲ್ಲಿ ಇರಲಿಲ್ಲ. ನಮಗೆ ಸಾರ್ವಜನಿಕರು ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಮಾಹಿತಿಯು ಫೋನ್ ಮೂಲಕ ಬಂದಿತ್ತು. ನಾನು ಮಾಹಿತಿ ಬಂದ ತಕ್ಷಣ ಸ್ವ ದೂರನ್ನು ತಯಾರಿಸಿ ಪ್ರಕರಣವನ್ನು ದಾಖಲಿಸಿರುತ್ತೇನೆ. ಆ ಸಮಯದಲ್ಲಿ ಯಾವುದೇ ಪರಿಶೀಲನೆ ಮಾಡಿರುವುದಿಲ್ಲ. ನಮ್ಮ ಠಾಣೆಯಿಂದ ನ್ಯಾಯಾಲಯವು ಸುಮಾರು 1 ಕಿ.ಮೀ ಅಂತರದಲ್ಲಿ ಇರುತ್ತದೆ. ಸದರಿ ಪ್ರ.ವ ವರದಿಯನ್ನು ಸಿಬ್ಬಂದಿಯವರಿಗೆ ನ್ಯಾಯಾಲಯಕ್ಕೆ ಕಳುಗಿಹಿಸಿಕೊಡಲು ತಿಳಿಸಿ ನಂತರ ನಾವು ದಾಳಿಗೆ ಹೋಗಿರುತ್ತೇವೆ. ಶೋಧನಾ ವಾರೆಂಟನ್ನು ಎಸ್ ಪಿ ಯವರು ನೀಡುತ್ತಾರೆ. ಸದರಿ ದಿನ ನಾವು ಘಟನಾ ಸ್ಥಳಕ್ಕೆ ನನ್ನ ಸಂಬಂಧಿಯ ಕಾರಿನಲ್ಲಿ ಹೋಗಿರುತ್ತೇವೆ. ನಾವು ಖಾಸಗಿ ವಾಹನದಲ್ಲಿ ಘಟನಾ ಸ್ಥಳಕ್ಕೆ ಹೋಗುವ ಸಂದರ್ಭದಲ್ಲಿ ಸದರಿ ವಾಹನದ ಸಂಖ್ಯೆಯನ್ನು ಇಲಾಖಾ ಡೈರಿಯಲ್ಲಿ ನಮೂದು ಮಾಡಿ ಹೋಗುತ್ತೇವೆ ಎಂದರೆ ಸರಿ. ನಾವು ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿ ನಂತರ ಪ್ರ.ವ ವರದಿಯನ್ನು ದಾಖಲು ಮಾಡುತ್ತೇವೆ. ಘಟನಾ ಸ್ಥಳದ ಹತ್ತಿರದಲ್ಲಿ ಸಿಕ್ಕಿದ್ದ ವ್ಯಕ್ತಿಗಳನ್ನು ಪಂಚರನ್ನಾಗಿ ಮಾಡಿಕೊಂಡಿರುತ್ತೇವೆ. ಆರೋಪಿಯ ಮನೆಯಿಂದ ಸುಮಾರು 50 ಮೀಟರ್ ದೂರದಲ್ಲಿ ಪೆಟ್ರೋಲ್ ಬಂಕ್ ಇರುತ್ತದೆ. ಆರೋಪಿಯ ಮನೆಯನ್ನು ದಾಳಿ ಹೋದ ನಂತರ ಪೆಟ್ರೋಲ್ ಬಂಕ್ ಸಿಗುತ್ತದೆ ಎಂದರೆ ಸರಿ.

ನಾವು ಮೊದಲು ಪಂಚರಿಗೆ ವಿಷಯವನ್ನು ತಿಳಿಸಿ ನಂತರ ಅವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಅಲ್ಲಿ ಇದ್ದ ಓಡಿ ಹೋದ 4 ಜನರು ಕಾಫಿ ತೋಟದ ಕಡೆಗೆ ಓಡಿ ಹೋಗಿದ್ದರಿಂದ ಹಾಗೂ ಕತ್ತಲೆಯಾಗಿದ್ದುದರಿಂದ ಅವರನ್ನು ಹಿಡಿಯಲು ಆಗಿರುವುದಿಲ್ಲ. ಅಲ್ಲಿಗೆ ನಂತರ ಬಂದ ಇಬ್ಬರು ವ್ಯಕ್ತಿಗಳು ನಮಗೆ ಮಾತಿಗೆ ಸಿಕ್ಕಿರುತ್ತಾರೆ. ಅವರನ್ನು ವಿಚಾರಿಸಲಾಗಿ ಅವರು ತಮ್ಮ ಹೆಸರು ಮತ್ತು ವಿಳಾಸವನ್ನು ತಿಳಿಸಲು ನಿರಾಕರಿಸಿರುತ್ತಾರೆ. ಅಲ್ಲಿ ನಂತರ ಬಂದ ಇಬ್ಬರು ವ್ಯಕ್ತಿಗಳ ಪರಿಚಯವಿದೆಯೇ ಎಂದು ನಮ್ಮ ಜೊತೆಯಲ್ಲಿ ಪಂಚರನ್ನು ಕೇಳಿರುತ್ತೇವೆ. ಓಡಿ ಹೋದ 4 ಜನರ ಹೆಸರು ಮತ್ತು ವಿಳಾಸವನ್ನು ಪಂಚರಲ್ಲಿ ವಿಚಾರಿಸಿರುತ್ತೇನೆ, ಆದರೆ, ನನಗೆ ಗೊತ್ತಿರಲಿಲ್ಲ. ಅದೇ ದಿನ ವಾಪಾಸ್ ಠಾಣೆಗೆ ಬಂದು ವರದಿ, ಸ್ವತ್ತುಗಳನ್ನು ಮತ್ತು ಫೋಟೋ ಹಾಗೂ ಸಿ.ಡಿಯನ್ನು ಚಾಸಾ-9 ರವರಿಗೆ ನೀಡಿರುತ್ತೇನೆ. ನಾನು ಪ್ರ.ವ ವರದಿಯನ್ನು ತಯಾರಿಸಿ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ ಅಂಶಗಳಿಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಫೋಟೋವನ್ನು ಮತ್ತು ಸಿ.ಡಿ ಯನ್ನು ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮು.ಮಾ.1 ಮತ್ತು 2 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

C.C.No1085/2025
PW-4 CW-1

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ